November 2024 Vol-I Issue 11 ISSN :3048-4944

# ಆಧ್ಯಾತ್ಮ ಸಂಪ್ರದಾಯ

# AADHYATMA SAMPRADAYA

Peer Reviewed

A MULTI DISCIPLINARY JOURNAL



Published by :
Shri Adhyatma Trust Committee
Bhandiwad Tq. Hubballi-580023

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

# ಆಧ್ಯಾತ್ಮ ಸಂಪ್ರದಾಯ

ಬಹುಶಿಸ್ತೀಯ ಸಂಶೋಧನಾ ಮಾಸಿಕ ಪತ್ರಿಕೆ

ISSN : 3048-4944

Vol-1 No. 11 November 2024

ಪ್ರಕಾಶಕರು :

ಅಧ್ಯಕ್ಷರು

ಶ್ರೀ ಆಧ್ಯಾತ್ಮ ಟ್ರಸ್ಟ ಕಮೀಟಿ ಭಂಡಿವಾಡ

ಸಂಪಾದಕರು

**ಡಾ. ರಾಮಚಂದ್ರ ಪಡೆಸೂರ**

ಸಹ ಸಂಪಾದಕರು

**ಶ್ರೀ ಎನ್.ಎನ್. ಬಾರಕೇರ**



## ಸಂಪಾದಕ ಮಂಡಳಿ

- **ಡಾ. ಅಡಿವೆಪ್ಪ ಚ. ವಾಲಿ**
  ಸಹ ಪ್ರಾಧ್ಯಾಪಕರು
  ಶ್ರೀಮತಿ ಗೌರಮ್ಮ ಬ. ಅಂಕಲಕೋಟಿ ಸ.ಪ್ರ.ದ. ಕಾಲೇಜು, ಶಿಗ್ಗಾಂವ
- **ಡಾ. ಮಲ್ಲಿಕಾರ್ಜುನ ಎನ್. ಮೂಲಿಮನಿ**
  ಮುಖ್ಯ ಗ್ರಂಥಪಾಲಕರು
  ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೀಡಿ
- **ಪ್ರೋ. ಸಿ. ಎಸ್. ಕುಮ್ಮೂರ**
  ಪ್ರಾಂಶುಪಾಲರು
  ಸರಕಾರಿ ಪ್ರಥಮ ದರ್ಜೆ ಕಾಲೇಜು, ಶಿಗ್ಗಾಂವ
- **ಡಾ. ಜೆ.ಎಮ್.ಚಂದುನವರ**
  ಅಧ್ಯಕ್ಷರು ಹಾಗೂ ಪ್ರಾಧ್ಯಾಪಕರು
  ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ
  ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ-580003
- **ಪ್ರೋ. ಪದ್ಮಮ್ಮಾ**
  ಪ್ರಾಧ್ಯಾಪಕರು,
  ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಸಂಶೋಧನಾ ವಿಭಾಗ
  ಕುವೆಂಪು ವಿಶ್ವವಿದ್ಯಾಲಯ ಶಿವಮೊಗ್ಗ
- **ಡಾ. ಮಲ್ಲಿಕಾರ್ಜುನ ಕೆ**
  ಕನ್ನಡ ಸಹ ಪ್ರಾಧ್ಯಾಪಕರು
  ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ
- **ಡಾ. ಮಾರಣ್ಣಾ, ಓ.**
  ಪ್ರಾಧ್ಯಾಪಕರು,
  ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಸಂಶೋಧನಾ ವಿಭಾಗ
  ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ
- **ಡಾ. ಬಿ.ಎನ್. ಅರವಿಂದ ಕುಮಾರ**
  ಕೃಷಿ ವಿಜ್ಞಾನ ಪ್ರಾಧ್ಯಾಪಕರು,
  ಕೃಷಿ ವಿಶ್ವವಿದ್ಯಾಲಯ ಧಾರವಾಡ-580005
- **ಡಾ. ಎಸ್. ಶಶಿರೇಖಾ**
  ಕನ್ನಡ ಸಹ ಪ್ರಾಧ್ಯಾಪಕರು
  ನೃಪತುಂಗ ವಿಶ್ವವಿದ್ಯಾಲಯ, ಬೆಂಗಳೂರು.
- **ಶ್ರೀ ವ್ಯಾಪಾರಿ ಮಧುಸೂದನ್ ಕೆ**
  ವಾಣಿಜ್ಯ ಸಹಾಯಕ ಪ್ರಾಧ್ಯಾಪಕರು
  ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಬೀಡಿ
- **ಶ್ರೀ ಆನಂದ ಇಂದೂರು**
  ಕನ್ನಡ ಸಹಾಯಕ ಪ್ರಾಧ್ಯಾಪಕರು
  ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಗ್ಗಾಂವ
- **ಶ್ರೀ ನವೀನ ಎನ್**
  ಸಮಾಜಶಾಸ್ತ್ರ ಸಹಾಯಕ ಪ್ರಾಧ್ಯಾಪಕರು
  ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಬೀಡಿ


## ಪರಿವಿಡಿ


1. ಕನ್ನಡ ಕಾವ್ಯದಲ್ಲಿ ಕೈಗಾರಿಕ ಪ್ರತಿನಿಧಿತ್ವ
   – ಡಾ. ಅಡಿವೆಪ್ಪ ಸಿ. ವಾಲಿ 01
2. ಕನ್ನಡ ಮುಸ್ಲಿಂ ಚಿಂತನ ಸಾಹಿತ್ಯ : ಮೂಲಭೂತವಾದಿ ವಿರೋಧಿ ನೆಲೆಗಳು.
   – ತೌಸಿಫ ಅಳವಂಡಿ ವಿ 04
3. ಮರುಗು ಭಾಷೆ
   – ಚಿಂದಸ್ವಾಮಿ ವಿ 08
4. ಕನ್ನಡ ಕಥೆಗಳಲ್ಲಿ ಕೈಗಾರಿಕಾ ಪ್ರಗತಿಯ ಪ್ರತಿನಿಧಿತ್ವ
   – ಡಾ. ಎಸ್. ಶಶಿರೇಖಾ 12
5. ಸಮರ್ಥ ರಾಮದಾಸರ ಶಿಷ್ಯ ಪರಂಪರೆ
   – ಡಾ. ರಾಮಚಂದ್ರ ಪಡೆಸೂರ 15
6. ವೀರನ ಜೊತೆ ಇರುವ ಮಾಸ್ತಿ ಶಿಲ್ಪಗಳು (ಗದಗ ಜಿಲ್ಲೆಯ ಅನುಲಕ್ಷಿಸಿ)
   – ಡಾ. ಶ್ವೇತಾ ರ. ಭಸ್ಮೆ 19



The views expressed in the articles side are the individual opinions of the authors and they in no way represent or reflect the opinion of AADHYATMA SAMPRADAYA nor does AADHYATMA SAMPRADAYA subscribe to these views in no way. All disputes are subject to the jurisdiction of Hubballi court only.


**: ಸೂಚನೆ :**

ಲೇಖನ ಹಾಗೂ ಸಂಶೋಧನಾ ಲೇಖನಗಳನ್ನು ಕಳಿಸುವವರು ಕಡ್ಡಾಯವಾಗಿ ಪತ್ರಿಕೆಯ ಸದಸ್ಯತ್ವ ಪಡೆದವರಾಗಿರಬೇಕು. ಲೇಖನ 2000 ಶಬ್ದಗಳನ್ನು ಮೀರಬಾರದು ಹಾಗೂ ಸಂಶೊಧನಾ ಲೇಖನವಾದಲ್ಲಿ 2500 ಶಬ್ದಗಳನ್ನು ಮೀರಿರಬಾರದು. ಹೆಚ್ಚಿನ ಸಂಖ್ಯೆಯಲ್ಲಿ ಪತ್ರಿಕೆಯ ಚಂದಾದರರಾಗಿ ಪತ್ರಿಕೆಯನ್ನು ಪ್ರೋತ್ಸಾಹಿಸಿರಿ. ಉತ್ತಮ ಲೇಖನ ಅಥವಾ ಸಂಶೋಧನಾ ಲೇಖನಗಳನ್ನು sampadakaruaas@gmail.com ಕಳಿಸಿರಿ.


CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

ISSN : 3048-4944

# ಸಮರ್ಥ ರಾಮದಾಸರ ಶಿಷ್ಯ ಪರಂಪರೆ

**ಡಾ. ರಾಮಚಂದ್ರ ಪಡೆಸೂರ**
**ಕೆ.ಎಲ್.ಇ. ಸಂಸ್ಥೆಯ**
**ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ,**
**ಗದಗ-೫೮೨ ೧೦೧**

ಭಾರತ ದೇಶವು ಹಲವು ಧರ್ಮ, ಜಾತಿ, ಪಂಥ, ಸಂಪ್ರದಾಯ, ಪರಂಪರೆಯ ತಾಯ್ನೆಲವಾಗಿದೆ. ಇದು 'ಸರ್ವಜನಾಂಗದ ಶಾಂತಿಯ ತೋಟ'ವಾಗಿದೆ. ಇಂತವುಗಳ ಪೈಕಿ "ಸಮರ್ಥ ರಾಮದಾಸರ ದಾಸಬೋಧ ಗ್ರಂಥವು ಸಜ್ಜನಗಡದ ರಾಮದಾಸಿ ಸಂಪ್ರದಾಯಕ್ಕೆ ಮಾರ್ಗದರ್ಶಿಯಾಗಿರುವಂತೆಯೇ, ಗೋಂದಾವಲೇಕರ ಬ್ರಹ್ಮಚೈತನ್ಯರ ಶಿಷ್ಯವರ್ಗಕ್ಕೂ, ನಂಬರಗಿ (ಇಂಚಗೇರಿ) ಸಂಪ್ರದಾಯದ ಸಾಧಕ ವರ್ಗಕ್ಕೂ ಪರಮಾರ್ಥ ಪ್ರದೀಪವಾಗಿದೆ. ಈ ಕಾರಣದಿಂದ ಕರ್ನಾಟಕದಲ್ಲಿ ಗೋಂದಾವಲೇಕರ ಆಶ್ರಮದ ಶಿಷ್ಯವರ್ಗಕ್ಕೂ, ನಂಬರಗಿಯ ಗುರುಲಿಂಗಜಂಗಮ ಮಹಾರಾಜರು ಸಂಪ್ರದಾಯದ ಅಡಿಪಾಯವನ್ನು ಹುಟ್ಟು ಹಾಕಿದ ಕಾರಣಕ್ಕಾಗಿ ಭಕ್ತ ಜನಸಮುದಾಯಕ್ಕೆ ಮರಾಠಿ ದಾಸಬೋಧವು ಜನಪ್ರಿಯತೆಯನ್ನು ಪಡೆದಿದೆ"1 ಎಂದು ಹೇಳಿದ್ದಾರೆ. ಆ ಎಲ್ಲ ಕಾರಣಕ್ಕಾಗಿಯೇ ಭಾರತದೆಲ್ಲೆಡೆ ಸಮರ್ಥರ ಗುರುಶಿಷ್ಯ ಪರಂಪರೆಯು ಈ ಕೆಳಗಿನಂತೆ ಕಂಡು ಬರುತ್ತದೆ.

ಆದಿನಾರಾಯಣ
↓
ಮಹಾವಿಷ್ಣು
↓
ಶ್ರೀಹಂಸ
↓
ಬ್ರಹ್ಮದೇವ
↓
ಬ್ರಹ್ಮಶ್ರೀ ವಶಿಷ್ಠ
↓
ಶ್ರೀರಾಮ
↓
ಸಮರ್ಥ ರಾಮದಾಸ

ಗುರುಲಿಂಗಜಂಗಮ ಮಹಾರಾಜ (ಇಂಚಗೇರಿ) | ಬ್ರಹ್ಮಚೈತನ್ಯ ಮಹಾರಾಜ (ಹೆಬ್ಬಳ್ಳಿ) | ಶ್ರೀಧರ ಸ್ವಾಮಿ (ವರದಹಳ್ಳಿ)

ಹೀಗೆ ಬೆಳೆದು ಬಂದಿರುವ ಗುರುಶಿಷ್ಯ ಪರಂಪರೆಯು ರಾಮದಾಸರಿಂದ ಅವರ ಶಿಷ್ಯೋತ್ತಮರಾದಿಯಾಗಿ ಲೋಕದ ಕಲ್ಯಾಣದ ಕೈಂಕರ್ಯವು ಮನ್ನಡೆಯಿತು. ಅವರಲ್ಲಿ ಪ್ರಮುಖವಾದವರೆಂದರೆ :

**1. ಅನಂತ ಬಟ್ಟ ಮತ್ತು ದಿವಾಕರ ಬಟ್ಟ :**

ಸಮರ್ಥರಿಂದ ಮಹಾಬಳೇಶ್ವರದಲ್ಲಿ ಕೀರ್ತನೆ ಪ್ರವಚನಗಳಾದವು ಈ ಪ್ರವಚನ ಕೇಳಲು ಬರುವವರಲ್ಲಿ ಅನಂತಬಟ್ಟ, ದಿವಾಕರಬಟ್ಟ ಎಂಬ ದೇಶಪಾಂಡೆ ಮನೆತನದ ಇಬ್ಬರು ತರುಣರು ಇವರತ್ತ ಆಕರ್ಷಿತರಾದರು. ಸಮರ್ಥರು ಅವರ ಯೋಗ್ಯತೆಯನ್ನು ಅರಿತು ಅವರಿಬ್ಬರಿಗೂ ಅನುಗ್ರಹವನ್ನು ಕೊಟ್ಟರು ದಿವಾಕರ ಬಟ್ಟ ಸಮರ್ಥರ ಪ್ರಮುಖ ಶಿಷ್ಯರಲ್ಲಿ ಒಬ್ಬರು.


CO-ORDINATOR
IQAC
K.L.E.S. Arts & Commerce College
GADAG
PRINCIPAL
K.L.E. Society's
Arts & Commerce College
GADAG-BETGERI-582101

2. ರಂಗನಾಥ ಸ್ವಾಮಿ, ಕೇಶವಸ್ವಾಮಿ :

ದೇಶ ಸಂಚಾರ ಕೈಗೊಳ್ಳುತ್ತಾ ಮಾಹುಲಿಯ ಜರಂಡಿಗಡ ಎಂಬಲ್ಲಿಗೆ ಬಂದು ನೆಲೆ ನಿಂತು ಸಂಗಮಕ್ಕೆ ನಿತ್ಯಸ್ನಾನಕ್ಕಾಗಿ ಬಂದು ಕ್ಷೇತ್ರದಲ್ಲಿ ಭಿಕ್ಷೆ ಬೇಡುತ್ತಿದ್ದರು. ಈ ಸಂದರ್ಭದ ವಿವರಗಳು ಮಾಹುಲಿಯಲ್ಲಿದ್ದಾಗ ಸಮರ್ಥರ ಹೆಸರು ಸಂತ ಮಂಡಳಿಗೆ ತಿಳಿದು ಅವರನ್ನು ಭೇಟಿಯಾಗಲು ಬಂದು ಹೋದ ಸಂತರಲ್ಲಿ ನಗಡಿಯ ರಂಗನಾಥ ಸ್ವಾಮಿಯು, ಭಾಗ್ಯಾನಗರದ ಅಂದರೆ ಇಂದಿನ ಹೈದ್ರಾಬಾದಿನ ಕೇಶವಸ್ವಾಮಿಗಳು ಸಮರ್ಥರಿಂದ ಪ್ರೇರಿತರಾಗಿ ಶಿಷ್ಯತ್ವವನ್ನು ಪಡೆದಿದ್ದಾರೆ.

3. ಅಕ್ಕಾಬಾಯಿ–ವೇಣಾಬಾಯಿ :

ಸಮರ್ಥರು ತಮ್ಮ ಕಾರ್ಯದಲ್ಲಿ ಯೋಗ್ಯವಾದ ಮರ್ಯಾದೆಯನ್ನು ಸೂಕ್ಷ್ಮವಾಗಿ ನಿರ್ವಹಿಸಿ ಸಮರ್ಥರು ಹೆಣ್ಣುಮಕ್ಕಳನ್ನು ಸಹಭಾಗಿಯಾಗಿ ತೆಗೆದುಕೊಳ್ಳುತ್ತಲಿದ್ದರು. ಇದೊಂದು ವಿಶೇಷವೆಂದು ಹೇಳಬೇಕಲ್ಲದೇ, ವಿಧವೆಯರಿಗೂ ಕೂಡ ಅವರು ಅಡ್ಡಿ ಮಾಡಿರಲಿಲ್ಲ. ಕರಾಡದಲ್ಲಿಯ ರುದ್ರಾಜಿಪಂಥ ದೇಶಪಾಂಡೆ ಇವರ ವಿಧವಾ ಕನ್ಯೆ ಅಕ್ಕಾ ಮತ್ತು ಮಿರಜದಲ್ಲಿಯ ಗೋಪಾಜಿಪಂಥ ದೇಶಪಾಂಡೆಯವರ ವಿಧವೆಯಾದ ಮಗಳು ವೇಣಾಬಾಯಿ ಈ ಇಬ್ಬರೂ ಸಮರ್ಥ ಸಂಪ್ರದಾಯದಲ್ಲಿ ಮಾನ್ಯತೆ ಪಡೆದ ಸ್ತ್ರೀಯರಾಗಿದ್ದರಲ್ಲದೇ, ಸಮರ್ಥರಿಂದ ಅನುಗ್ರಹ ಪಡೆದವರಾಗಿದ್ದರು. "ಇವರಲ್ಲಿ ವೇಣಾಬಾಯಿಯವರ ಮಿರಜದಲ್ಲಿರುವ ಮಠವು ಇಂದಿಗೂ ಪ್ರಸಿದ್ಧವಾಗಿದೆ. ವೇಣಾಬಾಯಿಯವರು 'ಸೀತಾಸ್ವಯಂವರ' ಎಂಬ ಗ್ರಂಥ ರಚಿಸಿದ್ದಾರೆ."2 ವೇಣಾಬಾಯಿ ಕ್ರಿ.ಶ. 1678 ರಲ್ಲಿ ಸಜ್ಜನಗಢದಲ್ಲಿ ಬಹಳ ವಿಜೃಂಬನೆಯಿಂದ ಏರ್ಪಟ್ಟ ರಾಮನವಮಿ, ಹನುಮ ಜಯಂತಿ ಉತ್ಸವಗಳಂದೇ ಸಮರ್ಥರ ಪಾದದ ಮೇಲೆ ತಲೆಯಿಟ್ಟವಳು ಮತ್ತೆ ಏಳದೇ ತನ್ನ ಪ್ರಾಣವನ್ನು ಗುರುಗಳ ಪಾದಕ್ಕೆ ಅರ್ಪಿಸಿದಳು.

4. ಕಲ್ಯಾಣಸ್ವಾಮಿ : (ಕ್ರಿ. ಶ. 1644–1714)

ಇವರು ಸಮರ್ಥ ರಾಮದಾಸರ ಆತ್ಮೀಯ ಹಾಗೂ ಅಂತಃಕರಣದ ಶಿಷ್ಯರಾಗಿದ್ದರು. ಇವರು ಡೋಮಗಾವದಲ್ಲಿ ಇರುವ ಮಠದ ಅಧಿಪತಿಯಾಗಿದ್ದ ಇವರು 56 ವರ್ಷಗಳವರೆಗೆ ಸಂಪ್ರದಾಯದ ಸೇವೆಯನ್ನು ಮಾಡಿದುದಲ್ಲದೇ, ಸಮರ್ಥ ರಾಮದಾಸರು ಬರೆದ ದಾಸಬೋಧದ ಶುದ್ಧಪ್ರತಿಯನ್ನು ಇವರು ಬರೆದರು. ಆ ಪ್ರತಿಯಿಂದಲೇ ಮುಂದೆ 1905 ರಲ್ಲಿ ಶ್ರೀ ಶಂಕರರಾವದೇವ ಇವರು ಮುದ್ರಿಸಿದರು.

5. ಮೇರುಸ್ವಾಮಿ :

ರಾಮದಾಸರು ದೇಶದ ಪರ್ಯಟನೆ ಸಂದರ್ಭದಲ್ಲಿ ಪಂಚವಟಿಯಿಂದ ನೇರವಾಗಿ ಕಾಶಿಗೆ ಹೋದರು. ಅಲ್ಲಿಂದ ಗಯೆ ಮತ್ತು ಪ್ರಯಾಗಕ್ಕೆ ಹೋದರು. ಅವರು ತ್ರಿಸ್ಥಳಿ ಯಾತ್ರೆಯನ್ನು ಪೂರೈಸಿದರು. ಮತ್ತೆ ಕಾಶಿಗೆ ಬಂದು ಅಲ್ಲಿ ಅವರು ಕೆಲದಿನ ತಂಗಿದರು. ಆ ಸಮಯದಲ್ಲಿ ಕಾಶಿಯ ಹನುಮಂತ ಘಾಟದಲ್ಲಿ ಅವರು ಮಾರುತಿಯನ್ನು ಸ್ಥಾಪಿಸಿದರೆಂದು ಒಂದು ಉಲ್ಲೇಖವಿದೆ. ಅಲ್ಲಿಂದ ಅವರು ಅಯೋಧ್ಯೆಗೆ ಹೋದರು. ಶ್ರೀರಾಮ ಅವರ ದೇವತೆ ಅಯೋಧ್ಯೆಯೇ ಆತನ ನಗರ, ಅಲ್ಲಿ ರಾಮದಾಸರ ವಾಸ್ತವ್ಯ ಹೆಚ್ಚಿನ ಕಾಲ ಆಗಿರುವುದು ಸಹಜ. ಅಯೋಧ್ಯೆಯಲ್ಲಿ ಅವರು 11 ತಿಂಗಳ ಕಾಲ ಕಳೆದ ಸಂದರ್ಭದಲ್ಲಿ ಮೇರುಸ್ವಾಮಿ ಹೆಸರಿನ ಒಬ್ಬ ಶಿಷ್ಯ ರಾಮದಾಸರ ಸೇವೆಗೈಯುತ್ತಾನೆ. ಮುಂದೆ ಈತ ಸಮರ್ಥರ ಪ್ರಮುಖ ಶಿಷ್ಯರಲ್ಲಿ ಒಬ್ಬನಾಗುತ್ತಾನೆ.

6. ಶ್ರೀಧರ ಸ್ವಾಮಿ:

ಶ್ರೀಧರ ಸ್ವಾಮಿಗಳ ಪೂರ್ವಿಕರು ಮಹಾರಾಷ್ಟ್ರ ರಾಜ್ಯದ ನಾಂದೇಡ ಜಿಲ್ಲೆಯ 'ದೇಗಲೂರ'ದವರು. ಇದು ಗೋದಾವರಿ ತೀರದಲ್ಲಿದೆ. ನಾರಾಯಣ ಮತ್ತು ಕಮಲಾಬಾಯಿಯ ಪುಣ್ಯಗರ್ಭದಲ್ಲಿ ಜನಿಸಿದವರೇ 'ಶ್ರೀಧರ'. ಕೀಲಕ ಸಂವತ್ಸರದ ಮಾರ್ಗಶಿರ ಪೌರ್ಣಿಮೆ ಸೋಮವಾರ 7–12–1908 ರಂದು ರಾತ್ರಿ 7.20ಕ್ಕೆ ಗುಲಬರ್ಗಾ ಜಿಲ್ಲೆಯ ಲಾಡಚಿಂಚೋಳಿ ಗ್ರಾಮದಲ್ಲಿ ಜನಿಸಿದರು. ಪ್ರಥಮವಾಗಿ "ಶ್ರೀಧರರು ಹುಸೇನ ಆಲಮ್ ಎಂಬ ಪ್ರದೇಶದಲ್ಲಿ ಶ್ರೀಸಮರ್ಥ ರಾಮದಾಸರ ಸಂಪ್ರದಾಯಕ್ಕೆ ಸೇರಿದ ಶ್ರೀನಾರಾಯಣ ಬುವಾ ರಾಮದಾಸೀ ಎಂಬ ಸಾಧುಗಳ ಮಠದಿಂದ ಪ್ರಭಾವಿತರಾಗಿದ್ದರು." ಕ್ರಿ.ಶ. 1923ನೆಯ ವರ್ಷಕ್ಕೆ ಅವರಿಗೆ ತಪಸ್ಸು ಮಾಡಬೇಕೆಂಬ ಹಂಬಲ



CO-ORDINATOR
IQAC
K.L.E.S' Arts & Commerce College
GADAG
ಆಧ್ಯಕ್ಷರು PRINCIPAL
K.L.E. Society's
Arts & Commerce College
GADAG-BETGERI-582101

ಹೆಚ್ಚಿ ಸಜ್ಜನಗಡಕ್ಕೆ ಹೋಗಿ ಶ್ರೀಸಮರ್ಥ ರಾಮದಾಸರ ಗುಡಿಯ ಎದುರು ತ್ರಯೋದಶಾಕ್ಷರಿ ಶ್ರೀರಾಮಮಂತ್ರ ಬರೆದು ನೂರೆಂಟು ಬಾರಿ ಪಠಿಸಿ ಸಮರ್ಥ ರಾಮದಾಸರನ್ನೇ ಗುರುವೆಂದು ಭಾವಿಸಿ 1927ನೆಯ ಗುರುವಾರ ಸಜ್ಜನಗಡಕ್ಕೆ ಹೋದರು. ಅಲ್ಲಿ ಶ್ರೀಸಮರ್ಥ ರಾಮದಾಸರ ಗುಡಿ ಹೊಕ್ಕಾಗ ಸದ್ಗುರುಗಳೇ ಅವರ ಮೈಮೇಲೆ ಕಾವಿ ಬಟ್ಟೆ ಹಾಕಿದಂತಾಗಿ ಸೇವೆಯಲ್ಲಿ ತತ್ಪರರಾದರು ದಿನಾಂಕ:19.04.1973 ರಂದು ದೇಹವನ್ನು ತ್ಯಜಿಸಿದರು.

7. ಹನುಮಂತಸ್ವಾಮಿ:

ಸಮರ್ಥ ಸಂಪ್ರದಾಯದಲ್ಲಿ ಹನುಮಂತ ಸ್ವಾಮಿಯವರ ಸ್ಥಾನವು ವೈಶಿಷ್ಟ್ಯಪೂರ್ಣವಾದುದು. ಸಮರ್ಥರ ಅಣ್ಣ ಗಂಗಾಧರ ಸ್ವಾಮಿಯವರ ಮೊಮ್ಮಗನ ಮೊಮ್ಮಗ ಈ ಹನುಮಂತಸ್ವಾಮಿ. ಸಮರ್ಥರು ಸ್ಥಾಪಿಸಿದ ಮಠಗಳಲ್ಲಿ ಚಾಫಳದ ಮಠವು ಎಲ್ಲವುಗಳಿಗಿಂತ ಮಹತ್ವದ್ದು ಸನ್ 1783 ರಿಂದ 35 ವರ್ಷ ಹನುಮಂತ ಸ್ವಾಮಿಯವರು ಚಾಫಳ ಮಠದ ಅಧಿಪತಿಗಳಾಗಿದ್ದರು.

8. **ಭೀಮಸ್ವಾಮಿ :**

ಸಮರ್ಥರು ದೇಶಪರ್ಯಟನೆ ಕೈಗೊಂಡು ತಾವು ತಂಗಿದ ಸ್ಥಳಗಳಲ್ಲೆಲ್ಲಾ ಮಠ ಸ್ಥಾಪನೆ ಮಾಡಿ ಅಲ್ಲಿಂದ ತಮ್ಮ ಪ್ರಯಾಣವನ್ನು ಮುಂದುವರೆಸುತ್ತಿದ್ದರು. ಅಂತಹ ಸ್ಥಳಗಳಲ್ಲಿ ಸಮರ್ಥರು ಸ್ಥಾಪಿಸಿದ ತಂಜಾವೂರಿನ ಸ್ಥಳವೂ ಒಂದು. ಅದಕ್ಕೆ ಅಧಿಪತಿಯಾಗಿ ಸಮರ್ಥರು ಈ ಭೀಮಸ್ವಾಮಿಯವರನ್ನು ನೇಮಕ ಮಾಡಿ ಮುನ್ನಡೆಸಿಕೊಂಡು ಹೋಗಲು ಸೂಚಿಸಿದರು.

9. **ದಿನಕರಸ್ವಾಮಿ :**

ಇವರು ಗೃಹಸ್ಥಾಶ್ರಮದಲ್ಲಿದ್ದು ತೀಸಗಾವ ಎಂಬ ಮಠದ ಅಧಿಪತಿಯಾಗಿದ್ದರು. ಬಂಗಾರಪೂರದಿಂದ ಮೂವತ್ತೈದು ಮೈಲು ದೂರವಿರುವ ವೃದ್ಧೇಶ್ವರ ಎಂಬ ದೇವಸ್ಥಾನದಲ್ಲಿ ಕ್ರಿ.ಶ. 1654ರಲ್ಲಿ ಇವರಿಗೆ ಸಮರ್ಥ ರಾಮದಾಸರಿಂದ ಅನುಗ್ರಹವಾಯಿತು. ಇವರು ಮಹಾರಾಷ್ಟ್ರ ರಾಜ್ಯದ ಅಹಮದ್‌ನಗರ ಜಿಲ್ಲೆಯಲ್ಲಿ ಸಂಪ್ರದಾಯ ಪ್ರಸಾರ ಕಾರ್ಯವನ್ನು ಮಾಡಿದರು. ಇವರು ಮಾಡಿದ ಗ್ರಂಥ ರಚನೆ ಕಾರ್ಯದಲ್ಲಿ 'ಸ್ವಾನುಭವ ದಿನಕರ' ಎಂಬ ಗ್ರಂಥವು ಅತೀ ಶ್ರೇಷ್ಠವಿರುತ್ತದೆ. ಸಮರ್ಥ ಸಂಪ್ರದಾಯದಲ್ಲಿ ಈ ಗ್ರಂಥಕ್ಕೆ ದಾಸಬೋಧದಂತೆಯೇ ಮಾನ್ಯತೆಯಿರುತ್ತದೆ.

10. **ಗಿರಿಧರಸ್ವಾಮಿ** :(1576–1651)

ಇವರು ಮೂಲತ: ಮಿರಜದವರಿದ್ದು, ಮುಂದೆ ಗುರುವಿನ ಆಜ್ಞಾನುಸಾರವಾಗಿ 'ಬೀಡ' ಹತ್ತಿರವಿರುವ 'ಈಟ' ಎಂಬಲ್ಲಿ ಶ್ರೀಸಮರ್ಥ ರಾಮದಾಸ ಸ್ವಾಮಿಗಳ ಚರಿತ್ರೆಯನ್ನು ಬರೆದಿರುತ್ತಾರೆ. ಅದಲ್ಲದೇ ಮಂಗಲ ರಾಮಾಯಣ, ನವ್ವತ್ತಿರಾಮ, ಛಂದೋರಾಮಾಯಣ, ಸಂಕೇತ ರಾಮಾಯಣ, ಆತ್ಮಾನುಭವ ಮುಂತಾದ ಗ್ರಂಥಗಳನ್ನು ರಚಿಸಿ ಸದ್ಗುರು ಸಂಪ್ರದಾಯದ ಮೂಲಕ ಸಾಹಿತ್ಯ ಲೋಕಕ್ಕೆ ಕೊಡುಗೆಯನ್ನು ನೀಡಿದ್ದಾರೆ.

11. **ಗಂಗಾಧರ ಉರ್ಫ ರಾಮಿರಾಮದಾಸ** :(ಕ್ರಿ. ಶ 1605–1677)

ಇವರು ಸಮರ್ಥ ರಾಮದಾಸರ ಬಂಧುಗಳಾಗಿದ್ದು, ಇವರಿಗೆ ಎಲ್ಲರೂ "ಶ್ರೇಷ್ಠ" ಎಂಬುವ ಬಿರುದಿನಿಂದಲೇ ಕರೆಯುತ್ತಿದ್ದರು. ಚಾಫಳದಲ್ಲಿ ಇರುವ ಮಠದ ಮೂಲ ಪುರುಷರು ಇವರಾಗಿದ್ದು, ಚಾಫಳ ಮಠದ ಪೀಠವು ಇವರ ವಂಶಜರಿಂದ ನಡೆಯುತ್ತದೆ. ಇವರು "ಭಕ್ತಿ ರಹಸ್ಯ" ಹಾಗೂ "ಸುಗಮೋಪಾಯ" ಎಂಬ ಎರಡು ಗ್ರಂಥಗಳ ರಚನೆಯನ್ನು ಮಾಡಿದ್ದಾರೆ.

12. **ದತ್ತಾತ್ರೇಯ ಸ್ವಾಮಿ :**

ಇವರು ಸಮರ್ಥ ರಾಮದಾಸರ ಶಿಷ್ಯರಲ್ಲಿ ಪ್ರಮುಖರು ಸಮರ್ಥರು ತೀರ್ಥಾಟನೆ ಕೈಗೊಂಡ ಶಿರಗಾಂವ ಪ್ರದೇಶದಲ್ಲಿ ಮಠವನ್ನು ಕಟ್ಟಿ ಅದರಲ್ಲಿ ಒಬ್ಬ ಸಮರ್ಥನನ್ನು ಶೋಧಿಸಿ ಶಿಷ್ಯನನ್ನಾಗಿ ನೇಮಿಸುವ ಸಲುವಾಗಿ ಯೋಚಿಸುತ್ತಿದ್ದಾಗ ಶ್ರೀದತ್ತಾತ್ರೇಯ ಸ್ವಾಮಿಯನ್ನು ಮಹಂತನೆಂದು ಕರೆದು ಆ ಮಠಕ್ಕೆ ಪೀಠಾಧಿಪತಿಯನ್ನಾಗಿ ಮಾಡಿದರು.



CO-ORDINATOR
IQAC
K.L.E.S' Arts & Commerce College
GADAG
PRINCIPAL
K.L.E. Society's
Arts & Commerce College
GADAG-BETGERI-582101

13. ಉದ್ಧವ :

ಸಮರ್ಥ ಸಂಪ್ರದಾಯದ ರಾಮದಾಸರ ಶಿಷ್ಯರಲ್ಲಿ ಅಗ್ರಮಾನ್ಯರಾದವರಲ್ಲಿ ಉದ್ಧವರು ಒಬ್ಬರು. "ಟಾಕಳಿಯ ಗಿರಿಧರಪಂತ ಮತ್ತು ಅನ್ನಪೂರ್ಣಾಬಾಯಿ ದಂಪತಿಗಳ ಪುತ್ರನು. ಈತನ ತಂದೆಯು ಅಕಾಲಿಕ ಸಾವನ್ನಪ್ಪಿದ ಸಂದರ್ಭದಲ್ಲಿ ರಾಮದಾಸರು ಆ ಸ್ಥಳಕ್ಕೆ ಆಗಮಿಸಿ "ಶ್ರೀರಾಮ ಜಯರಾಮ" ಎಂದು ರಾಮನಾಮ ಜಪ ಮಾಡುತ್ತಾ ಕಮಂಡಲದಲ್ಲಿದ್ದ ತೀರ್ಥವನ್ನು ದೇಹದ ತುಂಬೆಲ್ಲಾ ಪ್ರೋಕ್ಷಣೆ ಮಾಡಿದಾಗ ಗಿರಿಧರಪಂತ ಕುಲಕರ್ಣಿ ಜೀವಂತವಾದನು."3 ಈ ಪ್ರಸಂಗದಿಂದ ಕೃತಜ್ಞತಾ ಭಾವದಿಂದ ಕೈ ಜೋಡಿಸಿ ನಂತು ಮಹಾಮಹಿಮರೇ ನಮ್ಮ ಹೊಟ್ಟೆಯಲ್ಲಿ ಹುಟ್ಟುವ ಮೊಟ್ಟಮೊದಲನೇ ಸಂತಾನವನ್ನು ನಾವು ತಮ್ಮ ಪಾದಗಳಿಗೆ ಅರ್ಪಿಸುತ್ತೇವೆಂದು ಸಂಕಲ್ಪ ಮಾಡಿದರು. ದಂಪತಿಗಳಿರ್ವರಿಗೆ ಜನಿಸಿದ ಮಗುವಿಗೆ ಉದ್ಧವನೆಂದು ನಾಮಕರಣ ಮಾಡಿ ಮುಂದೆ 8 ವರ್ಷದವನಾದಾಗ ತಾವು ತಪಗೈಯುತ್ತಿದ್ದ ಗುಹೆಯ ಮಾರುತಿ ಮಂದಿರಕ್ಕೆ ಉದ್ಧವನನ್ನೇ ಮಠಾಧಿಪತಿಯನ್ನಾಗಿ ಮಾಡಲಾಯಿತು.

14. ಶಿವಾಜಿ :(1627–1680)

ಶಿವಾಜಿಯು ಏಪ್ರಿಲ್ 20, 1627 ರಂದು ಪುಣಾ ಬಳಿಯ ಶಿವನೇರಿದುರ್ಗದಲ್ಲಿ ಜನಿಸಿದನು. ತಂದೆ ಶಹಾಜಿಯು ಬಿಜಾಪೂರದ ಸುಲ್ತಾನ ಮಹಮದ್ ಆದಿಲ್‌ಷಾನ ಸೇನೆಯಲ್ಲಿದ್ದನು. ತಾಯಿ ಜೀಜಾಬಾಯಿ ದೇವಗಿರಿಯ ಯಾದವ ಸಂತತಿಗೆ ಸೇರಿದವಳು. ಶಹಾಜಿ ಮತ್ತೊಬ್ಬ ಪತ್ನಿ ತುಕಾಬಾಯಿಯೊಂದಿಗೆ ಬೆಂಗಳೂರಿಗೆ ಬಂದು ನೆಲೆಸಿದನು. ಶಿವಾಜಿ ತನ್ನ ಬಾಲ್ಯ ದಿನಗಳನ್ನು ತಂದೆಯ ಜಹಗೀರಾದ ಪುಣಾದಲ್ಲಿ ಕಳೆದನು. ಜೀಜಾಬಾಯಿ ಒಬ್ಬ ಸದ್ಗುಣ, ಸಂಪನ್ನ ಮಹಿಳೆ. ಶಿವಾಜಿಗೆ ರಾಮಾಯಣ, ಮಹಾಭಾರತದ ಕಥೆ ಹಾಗೂ ಸತ್ಪುರುಷರ ವೀರ ಕಥೆಗಳನ್ನು ಹೇಳುತ್ತಾ ಅವನಲ್ಲಿ ಶೌರ್ಯ, ಸಾಹಸ, ಉನ್ನತ ಆದರ್ಶಗಳನ್ನು ತುಂಬಿದಳು. ಹಿಂದೂ ಧರ್ಮದ ಬಗ್ಗೆ ಆದರಾಭಿಮಾನ ಮೂಡಿಸಿದಳು. ಶಿವಾಜಿಯ ಗುರು ದಾದಾಜಿಕೊಂಡದೇವನು ಶಿವಾಜಿಗೆ ಕುದುರೆ ಸವಾರಿ, ಕತ್ತಿ ವರಸೆ, ಶಸ್ತ್ರಾಭ್ಯಾಸ ಮೊದಲಾದ ಯುದ್ಧ ಕಲೆಗಳನ್ನು ಕಲಿಸಿದನು. ಶಿವಾಜಿಯ ಆಧ್ಯಾತ್ಮಿಕ ಗುರು ರಾಮದಾಸರು ಅವನಗೆ ಹಿಂದೂ ಧರ್ಮ ರಕ್ಷಣೆ ಮಂತ್ರವನ್ನು ಬೋಧಿಸಿದರು. ಮಹಾರಾಷ್ಟ್ರದ ಕೋಟೆಗಳು, ಸಂತರು, ಅದರ ಪರಿಸರ ಅವನಲ್ಲಿ ಸ್ವತಂತ್ರ ಪ್ರಜ್ಞೆ ಮೂಡಿಸಿದವು.

ಈ ಎಲ್ಲ ವಿಚಾರಗಳನ್ವಯ ಸಮರ್ಥರು ತಮ್ಮ ಬದುಕನ್ನು ರೂಪಿಸಿಕೊಂಡವರು. ಕೊನೆಗಾಲದಲ್ಲಿ ಸಜ್ಜನಗಢದಲ್ಲಿಯೇ ವಾಸ್ತವ್ಯ ಮಾಡಿ ಶಿಷ್ಯರನ್ನು ಸಂಪ್ರದಾಯ ಬೆಳೆಸಲು ಮುನ್ನಡೆಸಿದರೆಂಬುದು ತಿಳಿದು ಬರುತ್ತದೆ.

**ಕೊನೆಟಿಪ್ಪಣಿ**


1. ಕುಲಕರ್ಣಿ ಫ. ಹ., ದಾಸಬೋಧ ಸುಧೆ, ಪು.ಸಂ. 4 ಶ್ರೀ ಗುರುದೇವ ರಾನಡೆ, ಸಮಾಧಿ ಟ್ರಸ್ಟ್, ನಂಬಾಳ, 2000
2. ಯತೀಶ್ವರ ಸೀ. ಚ., ಭಾರತೀಯ ಭಕ್ತಿ ಚಳುವಳಿ, ಪು.ಸಂ. 768 ಮಹಿಮಾ ಪ್ರಕಾಶನ ಮೈಸೂರು, 2017
3. ಕರಂದೀಕರ ವಿ.ರಾ., ಸಮರ್ಥ ರಾಮದಾಸರು ಅನು: ಬೆಳಗಲಿ ದು. ನಂ., ಪು.ಸಂ. 29, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, 1996


**ಪೂರಕ ಸಾಹಿತ್ಯ**


1. ರಾಮಚಂದ್ರ ಪಡೆಸೂರ, ರಾಮದಾಸರ ದಾಸಬೋಧ: ಕನ್ನಡ ಆವೃತ್ತಿಗಳ ತೌಲನಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ 2024
2. ವಾಲಿ ಎ.ಸಿ. ದಾಸಬೋಧ(ಅನು) ಕಿರಣ ದರ್ಶನ ಪ್ರಕಾಶನ, ಭಂಡಿವಾಡ ತಾ. ಹುಬ್ಬಳ್ಳಿ




CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101